ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560001

ಪತ್ರ ಸಂಖ್ಯೆ: ಸಿ3(7) ಪ್ರಾ.ಶಾ.ಶಿ. ವರ್ಗ,ವೈ.ತ/01/2017-18 ದಿನಾಂಕ: 12/06/2019

ಗೆ,

ಆಯುಕ್ತರು.
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
ಆನಂದರಾವ್ ವೃತ್ತ.
ಬೆಂಗಳೂರು.

ಮಾನ್ಯರೆ,

ವಿಷಯ:- ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ವರ್ಗಾವಣೆ ಆದ್ಯತೆ ಸಂಬಂಧ "ತೀವ್ರ ಅನಾರೋಗ್ಯದಿಂದ ಬಳಲುತ್ತಿರುವ ಶಿಕ್ಷಕರು ಮತ್ತು (ಪತಿ ಅಥವಾ ಪತ್ನಿ, ಮಕ್ಕಳು) ಅವಲಂಬಿತರ ಪ್ರಕರಣಗಳಿಗೆ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ನೀಡಲು ಮತ್ತು ವಿಭಾಗ ಮಟ್ಟದ ತ್ರಿ-ಸದಸ್ಯ ಸಮಿತಿ ರಚಿಸಿ ವೈದ್ಯಕೀಯ ಪ್ರಮಾಣ ಪತ್ರದ ಸತ್ಯಾಸತ್ಯತೆಯ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿ ವೈದ್ಯಕೀಯ ಪ್ರಮಾಣ ಪತ್ರ ನೀಡಲು ಹಾಗು ಅಂಗವಿಕಲ ಶಿಕ್ಷಕರ ಪ್ರಕರಣಗಳಲ್ಲಿ ಪರೀಕ್ಷಣೆಗೆ ಒಳಪಡಿಸಿ ವೈದ್ಯಕೀಯ ಪ್ರಮಾಣ ಪತ್ರ ವಿತರಿಸಲು ಸಂಬಂಧಿತರಿಗೆ ನಿರ್ದೇಶನ ನೀಡುವಂತೆ ಕೋರಿ.

ಉಲ್ಲೇಖ:- 1) ಸರ್ಕಾರದ ಅಧಿಸೂಚನೆ ಇಡಿ 12 ಇಟಿಆರ್ 2017 ದಿನಾಂಕ 29/11/2017
2) ಈ ಕಛೇರಿ ಪತ್ರ ಸಂಖ್ಯೆ ಸಿ3(7) ಪ್ರಾ.ಶಾ.ಶಿ. ವರ್ಗ,ವೈ.ತ/01/2017-18 ದಿನಾಂಕ 06/01/2018

---*****---

1. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ-2007 ರಡಿಯಲ್ಲಿ ರೂಪಿಸಲಾಗಿರುವ "ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ತಿದ್ದುಪಡಿ ನಿಯಮಗಳು-2017 ದಿನಾಂಕ 29/11/2017ರಂತೆ ಪ್ರತಿ ವರ್ಷ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ.
2. 2018ನೇ ಸಾಲಿನ ಸ್ಥಗಿತಗೊಂಡಿದ್ದ ಶಿಕ್ಷಕರ ವರ್ಗಾವಣೆಗಳನ್ನು ಸರ್ಕಾರದ ನಿರ್ದೇಶನದನ್ವಯ ಇದೀಗ ಪುನಃ ಹಮ್ಮಿಕೊಂಡು ಮುಂದುವರೆಸಲು ದಿನಾಂಕ 01/06/2019ರಲ್ಲಿ ಈಗಾಗಲೇ ಮಾರ್ಗಸೂಚಿಯನ್ನು ಪ್ರಕಟಿಸಲಾಗಿದ್ದು ಪ್ರಕ್ರಿಯೆ ಚಾಲ್ತಿಯಲ್ಲಿದೆ.
3. ವರ್ಗಾವಣೆಗಳ ಸಂಬಂಧ ಸರ್ಕಾರದ ಆದೇಶದನುಸಾರ ಎಲ್ಲ ವೈದ್ಯಕೀಯ ಮತ್ತು ಅಂಗವಿಕಲ ಪ್ರಕರಣಗಳಿಗೆ ನಿಯಮಾನುಸಾರ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರವನ್ನು ಕಡ್ಡಾಯಗೊಳಿಸಲಾಗಿದೆ.
4. "ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ತಿದ್ದುಪಡಿ ನಿಯಮಗಳು-2017ರ ಪ್ರಕರಣ 14(1) ರಲ್ಲಿ "Teacher or spouse or child suffering from terminal illness for which treatment is not possible within the unit of seniority" ಎಂದು ಉಲ್ಲೇಖಿಸಲಾಗಿದೆ. ' ಶಿಕ್ಷಕನು ಅಥವಾ ಅವನ/ಅವಳ, ಗಂಡ/ಹೆಂಡತಿಯು ಅಥವಾ ಮಕ್ಕಳು ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದಲ್ಲಿ ಮತ್ತು ಅದಕ್ಕೆ ವೈದ್ಯಕೀಯ ಚಿಕಿತ್ಸೆಯು ಅವನು/ಅವಳು ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ದೊರೆಯದಿದ್ದಲ್ಲಿ ಮತ್ತು ಅವನಿಗೆ/ಅವಳಿಗೆ ವೈದ್ಯಕೀಯ ಚಿಕಿತ್ಸೆಯ ಸ್ವರೂಪ, ಅವನು/ಅವಳು ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ಸಂಬಂಧಪಟ್ಟ ಕಾಯಿಲೆಗೆ ವೈದ್ಯಕೀಯ ಚಿಕಿತ್ಸೆ ದೊರೆಯದಿರುವ ಬಗ್ಗೆ ಮತ್ತು ಅಂತಹ ವೈದ್ಯಕೀಯ ಚಿಕಿತ್ಸೆ ದೊರೆಯುವ ಸ್ಥಳದ ಬಗ್ಗೆ ಮತ್ತು ಅವನು/ಅವಳು ಅಗತ್ಯ ವೈದ್ಯಕೀಯ ಚಿಕಿತ್ಸೆ ಪಡೆಯಲು ಅಂತಹ ಸ್ಥಳಕ್ಕೆ ವರ್ಗಾವಣೆ ಬಯಸಲು ಅವಕಾಶವಿದೆ.
5. ವೈದ್ಯಕೀಯ ಕಾರಣ ನಿಮಿತ್ಯದ ವರ್ಗಾವಣೆ ಕೋರಿಕೆಗಳಿಗೆ, ಕ್ಯಾನ್ಸರ್, ಕಿಡ್ನಿ ವೈಫಲ್ಯ, ಹೃದಯ ಸಂಬಂಧಿ, ಹೆಚ್.ಐ.ವಿ ಕಾಯಿಲೆಗಳನ್ನು ಮಾತ್ರ ತೀವ್ರತರ ಕಾಯಿಲೆ ಎಂಬುದಾಗಿ ಪರಿಗಣಿಸಲಾಗುತ್ತಿದ್ದು ಈ ತೀವ್ರತರ ಕಾಯಿಲೆಯಿಂದ ಬಳಲುತ್ತಿರುವ

ಶಿಕ್ಷಕ ಅಥವಾ ಅವರ ಅವಲಂಬಿತರು (ಶಿಕ್ಷಕ/ಶಿಕ್ಷಕಿ ಅಥವಾ ಮಕ್ಕಳು) ಬಳಲುತ್ತಿದ್ದಲ್ಲಿ ಮತ್ತು ಅವರು ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ವೈದ್ಯಕೀಯ ಚಿಕಿತ್ಸೆ ದೊರೆಯದ ಬಗ್ಗೆ ಮತ್ತು ವೈದ್ಯಕೀಯ ಚಿಕಿತ್ಸೆ ದೊರೆಯುವ ಸ್ಥಳದ ಬಗ್ಗೆ ಮತ್ತು ಅವನು/ಅವಳು ಅಗತ್ಯ ವೈದ್ಯಕೀಯ ಚಿಕಿತ್ಸೆ ಪಡೆಯಲು ಅವರನ್ನು ಅಂತಹ ಸ್ಥಳಕ್ಕೆ ವರ್ಗಾವಣೆ ಮಾಡುವುದು ಅವಶ್ಯಕವಿದೆ.

6. ವರ್ಗಾವಣಾ ನಿಯಮ 14(2) ರಲ್ಲಿ ತಿಳಿಸಿರುವಂತೆ ತೆರೆದ ಹೃದಯ ಶಸ್ತ್ರ ಚಿಕಿತ್ಸೆ ಅಥವಾ ಅಂಗಾಂಗ ಕಸಿ/ಮರು ಜೋಡಣೆಗೆ ಒಳಪಟ್ಟಿರುವ ಶಿಕ್ಷಕರಿಗೆ ಆದ್ಯತೆಯಲ್ಲಿ ಪರಿಗಣನೆಗೆ ಅವಕಾಶವಿದ್ದು ವೈದ್ಯಕೀಯ ತಪಾಸಣೆಗೆ ಒಳಪಡಿಸತಕ್ಕದ್ದು. (ಈ ಪ್ರಕರಣದಲ್ಲಿ ಶಿಕ್ಷಕರ ಅವಲಂಬಿತರಿಗೆ ಅವಕಾಶವಿರುವುದಿಲ್ಲ)

7. ನಿಯಮಗಳಲ್ಲಿ ಗರ್ಭಿಣಿ ಶಿಕ್ಷಕಿಯರಿಗೆ ಆದ್ಯತೆ ಕಲ್ಪಿಸಲಾಗಿದ್ದು ಈ ಪ್ರಕರಣಗಳಲ್ಲಿಯೂ ವೈದ್ಯಕೀಯ ಪ್ರಮಾಣ ಪತ್ರ ಅಗತ್ಯವಿದೆ.

8. ವರ್ಗಾವಣಾ ನಿಯಮ 14(3) ರ ಪ್ರಕಾರ ದೈಹಿಕ ಅಂಗವಿಕಲ ಪ್ರಕರಣಗಳಲ್ಲಿ ಸ್ವತಃ ಶಿಕ್ಷಕರು ಶೇ 40 ಕ್ಕಿಂತಲೂ ಹೆಚ್ಚಿನ ದೈಹಿಕ ಅಂಗವಿಕಲತೆಯ ಬಗ್ಗೆ ಪ್ರಮಾಣ ಪತ್ರವನ್ನು ಸಲ್ಲಿಸುವುದು ಕಡ್ಡಾಯಗೊಳಿಸಲಾಗಿದೆ. ಅಂತಹ ಶಿಕ್ಷಕರಿಗಿರುವ ದೈಹಿಕ ನ್ಯೂನತೆಗಳು ಹಾಗೂ ಅಂಗವಿಕಲತೆಯ ಸ್ವರೂಪ ಇವುಗಳ ಎಂಬುದರ ಬಗ್ಗೆ ನಿರ್ಧಿಷ್ಟವಾಗಿ ತಿಳಿಸಿರುವ "ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಶಿಕ್ಷಕರು ಹಾಜರುಪಡಿಸದ ಹೊರತು ಅಂತಹ ವರ್ಗಾವಣೆಯನ್ನು ಮಾಡಲು ಅವಕಾಶವಿರುವುದಿಲ್ಲ. ಈಗಾಗಲೇ ಶಿಕ್ಷಕರುಗಳು ವೈದ್ಯಕೀಯ ಮಂಡಳಿಯ ಪ್ರಮಾಣ ಪತ್ರವನ್ನು ಪಡೆಯಲು ಸಂಬಂಧಪಟ್ಟ ಜಿಲ್ಲಾ ಆಸ್ಪತೆಯನ್ನು ಸಂಪರ್ಕಿಸಿರುತ್ತಾರೆ. ದಯಮಾಡಿ ಜಿಲ್ಲಾ ಮಟ್ಟದಲ್ಲಿ ಅಂತಹಾ ಸ್ಥಾಯಿ ಮಂಡಳಿಗೆ ಶಿಕ್ಷಕರುಗಳನ್ನು ವೈದ್ಯಕೀಯ ಚಿಕಿತ್ಸೆಗೆ ಒಳಪಡಿಸುವ ಸಂಬಂಧ ಸೂಕ್ತ ನಿರ್ದೇಶನವನ್ನು ತಮ್ಮ ಹಂತದಲ್ಲಿ ನೀಡಲು ಕೋರಿದೆ.

9. ಹಾಗೆಯೇ, ಈ ಹಿಂದಿನ ಸಾಲುಗಳಂತೆಯೇ, ವಿಭಾಗ ಮಟ್ಟದಲ್ಲಿ ವೈದ್ಯಾಧಿಕಾರಿಗಳ ತ್ರಿ–ಸದಸ್ಯ ಸಮಿತಿಯಿಂದ ಸದರಿ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿರುವ ಶಿಕ್ಷಕರು ಅತ್ಯಂತ ತೀವ್ರತರ ಕಾಯಿಲೆಯಿಂದ ಬಳಲುತ್ತಿರುವ ಬಗ್ಗೆ ಸಲ್ಲಿಸಿರುವ ವೈದ್ಯಕೀಯ ಪ್ರಮಾಣ ಪತ್ರಗಳ ನೈಜತೆಯ ಕುರಿತಂತೆ ವೈದ್ಯಕೀಯ ತಪಾಸಣೆಯನ್ನು ನಡೆಸಿ, ತೀವ್ರತರ ಕಾಯಿಲೆಯಿಂದ ಬಳಲುತ್ತಿರುವ ಬಗ್ಗೆ ವೈದ್ಯಕೀಯ ಮಂಡಳಿಯಿಂದ ವೈದ್ಯಕೀಯ ಪ್ರಮಾಣ ಪತ್ರದ ನೈಜತೆಯನ್ನು ಪರಿಶೀಲಿಸಬೇಕಾಗಿದೆ, ಅಂತಹಾ ಪ್ರಮಾಣ ಪತ್ರಗಳ ನೈಜತೆಯ ಪರೀಕ್ಷೆಗಾಗಿ ವಿಭಾಗೀಯ ಮಟ್ಟದಲ್ಲಿ ಪುನರ್ ವೈದ್ಯಕೀಯ ಪರಿಶೀಲನೆಗೆ ಒಳಪಡಿಸಿ ನೈಜತೆಯನ್ನು ಪರಿಶೀಲಿಸಿಕೊಳ್ಳಬೇಕಾಗಿದೆ.

10. ವೈದ್ಯಕೀಯ ಮಂಡಳಿಯ ಪ್ರಮಣ ಪತ್ರದಲ್ಲಿ ಕಡ್ಡಾಯವಾಗಿ ಚಿಕಿತ್ಸೆಗೆ ಒಳಪಟ್ಟ ಶಿಕ್ಷಕರು ಅಥವಾ ಅವರ ಅವಲಂಬಿತರ ಜಂಟಿ ಭಾವಚಿತ್ರವನ್ನು ದೃಢೀಕರಿಸಲು ಹಾಗೂ ವೈದ್ಯಕೀಯ ಮಂಡಳಿಯ ಪ್ರಮಾಣ ಪತ್ರದಲ್ಲಿ ಶಿಕ್ಷಕರ ಹೆಸರು, ವಿಳಾಸ, ಶಿಕ್ಷಕರ ಕೆ.ಜಿ.ಐ.ಡಿ ಸಂಖ್ಯೆ, ಚಿಕಿತ್ಸೆಗೆ ಒಳಪಟ್ಟವರ ಆಧಾರ್ ಸಂಖ್ಯೆಯ ವಿವರಗಳ ಸಹಿತ ಸದರಿ ಕಾಯಿಲೆ ಮಾರಣಾಂತಿಕವೇ ಅಥವಾ ಇಲ್ಲವೇ ಎಂಬ ಬಗ್ಗೆ ಮತ್ತು ಸದರಿ ಸ್ಥಳದಲ್ಲಿ ವೈದ್ಯಕೀಯ ಚಿಕಿತ್ಸೆ ಸೌಲಭ್ಯ ಲಭ್ಯವಿಲ್ಲದೇ ಇರುವ ಬಗ್ಗೆ ವೈದ್ಯಕೀಯ ಮಂಡಳಿಯು ಸ್ಪಷ್ಟ ಅಭಿಪ್ರಾಯವನ್ನು ನಮೂದಿಸಲು ಜಿಲ್ಲಾ ಮಟ್ಟದ ಹಾಗೂ ವಿಭಾಗೀಯ ಮಟ್ಟದ ವೈದ್ಯಕೀಯ ಮಂಡಳಿಗೆ ತಮ್ಮ ಹಂತದಲ್ಲಿ ಸೂಕ್ತ ನಿರ್ದೇಶನ ನೀಡಬೇಕೆಂದು ಕೋರಿದೆ.

ವೈದ್ಯಕೀಯ ದಾಖಲೆಗಳ ನೈಜತೆ ಹಾಗೂ ತೀವ್ರತರ ಕಾಯಿಲೆ ಸಂಬಂಧ ವೈದ್ಯಕೀಯ ತಪಾಸಣೆ ನಡೆಸಿ ವೈದ್ಯಕೀಯ ದೃಢೀಕರಣ ನಿಡುವಂತೆ ತಮ್ಮ ಇಲಾಖಾ ವತಿಯಿಂದ ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗಾ ವಿಭಾಗದ ವೈದ್ಯಕೀಯ ಮಂಡಳಿಗೆ ಸೂಚಿಸಲು ಸಹ ಕೋರಲಾಗಿದೆ.

ವಂದನೆಗಳೊಂದಿಗೆ,

ತಮ್ಮ ನಂಬುಗೆಯ,

13/6/19

ನಿರ್ದೇಶಕರು

(ಪ್ರಾಥಮಿಕ ಶಿಕ್ಷಣ)

ಪ್ರತಿ :

1) ಸಹನಿರ್ದೇಶಕರು, ಸಾಶಿಇ, ಬೆಂಗಳೂರು ವಿಭಾಗ / ಮೈಸೂರು ವಿಭಾಗ / ಅಪರ ಆಯುಕ್ತರು, ಸಾಶಿಇ, ಗುಲ್ಬರ್ಗಾ / ಧಾರವಾಡ
2) ರಾಜ್ಯದ ಎಲ್ಲ ಸಾಶಿಇ ಉಪನಿರ್ದೇಶಕರು,
3) ರಾಜ್ಯದ ಎಲ್ಲ ಕ್ಷೇತ್ರಶಿಕ್ಷಣಾಧಿಕಾರಿಗಳು ( ಉಪನಿರ್ದೇಶಕರ ಮುಖಾಂತರ )